ಅಷ್ಟು ದೂರ ಹೋಗಿ ಬಿದ್ದ ಕೆಂಚನಿಗೆ ಸುಮಂಗ್ಲಿಯನ್ನು ಅಲ್ಲೇ ಕಡಿದು ಹಾಕುವಷ್ಟು ಸಿಟ್ಟು ಬಂತು. 'ಏ ನಿಮ್ಮೋನ್ ಸುಮ್ನಿರಾಕೇನ್ ಹಟ್ವಾರನು ನಿನಿಗೆ?' ಎಂದು ಹಲ್ಲುಕಡಿಯುತ್ತ ಎದ್ದು ಹೋಗಿ ಎರಡೂ ಕೈಗಳಿಂದ ಅವಳ ಕುತ್ತಿಗೆ ಹಿಡಿದು ಗಟ್ಟಿಯಾಗಿ ಹಿಚುಕತೊಡಗಿದ. ಸುಮಂಗ್ಲಿಯ ಕಣ್ಣುಗಳು ವಿಲ ವಿಲ ಒದ್ದಾಡತೊಡಗಿದವು.

ಆತ ಹಾಕಿ ಹೋಗಿರುವ ಲೋಭಾನ ಇನ್ನೂ ಮನೆ ತುಂಬ ಸುಳಿದಾಡುತ್ತ ಆತನ ಹೆಂಡತಿ ಮಕ್ಕಳಿಗೆ ಕಿರಿಕಿರಿ ಮಾಡತೊಡಗಿತು. ಶಾಂತಿಯಂತು ತಲೆಕೆಟ್ಟು ದೇವರಮನಿಗೆ ಹೋಗಿ ಇಡೀ ಪ್ಯಾಕ್ ಊದಿನಕಡ್ಡಿ ತಂದು ಹಚ್ಚಿ ಮನೆಯ ತುಂಬಾ ಅದರ ಹೊಗೆ ಹರಡಿಬಿಟ್ಟಳು. ಮೊದಲಾಗಿದ್ದರೆ ಶಾಕುಂತ್ಲಮ್ಮ ತನ್ನ ಮಗಳ ಈ ಅಪೂರ್ವ ಐಡಿಯಾವನ್ನು ಮೆಚ್ಚಿಕೊಳ್ಳುತ್ತಿದ್ದಳೇನೋ. ಆದರೆ ಮನೆತುಂಬ ದರಿದ್ರತನ ತಾಂಡವವಾಡುತ್ತಿರುವ ಇಂಥ ಕಾಲದಲ್ಲಿ, ಯಾರನ್ನಾದರು ಹಿಡಿದು ಬಟ್ಟೆ ಒಗೆದಂತೆ ಒಗೆಯಬೇಕು ಎಂಬಷ್ಟು ತನ್ನ ಮನಸ್ಸು ರೊಚ್ಚಿಗೆದ್ದಿರುವ ಇಂಥ ಹೊತ್ತಿನಲ್ಲಿ ತನ್ನ ಮಗಳು ಮನೆಯಲ್ಲಿ ಇದ್ದಬದ್ದ ಊದಿನಕಡ್ಡಿಯನ್ನೆಲ್ಲ ಹಾಳು ಮಾಡಿದ್ದು ಅವಳಿಗೆ ನಖಶಿಖಾಂತ ಉರಿಸಿಹಾಕಿತ್ತು. ಸಿಟ್ಟಿನಲ್ಲಿ ಕೈಲಿದ್ದ ಅಕ್ಕಿ ಅಳೆಯುವ ವಾಟಗದಿಂದ ಶಾಂತಿಯ ತಲೆಗೆ ಗುಮ್ಮಟ ಬರುವಂತೆ ಕುಟ್ಟಿಬಿಟ್ಟಳು. ಅವಳು ಕೊಯ್ ಕೊಯ್ ಮಾಡುತ್ತ ಅಡುಗೆ ಮನೆಯ ಕಂಬಕ್ಕೆ ಆತು ಕುಳಿತುಕೊಂಡಳು. ತನ್ನವ್ವನ ರೌದ್ರಾವತಾರ ನೋಡಿ ದಿಗಿಲುಗೊಂಡ ಮೋನೇಶಿ ಓದಿಕೊಳ್ಳುವ ನಾಟಕ ಮಾಡುತ್ತ ಕುಳಿತ.

ಇತ್ತ ಚೊಂಬು ಹಿಡಿದು ಹೊರಟ ಸನಾಯಿ ಗೌಡನ ಸವಾರಿ ಊರು ದಾಟಿ, ಹೊನ್ನುರಸ್ವಾಮಿ ದರ್ಗಾ ದಾಟಿ, ಬತ್ತಿ ಬಡಕಲಾಗಿರುವ ಹಳ್ಳ ದಾಟಿ ಬೇಲಿಗಳಿಂದಾವೃತವಾಗಿರುವ ಮಾಳಗಡ್ಡಿಗೆ ಬಂದಿದ್ದೇ ಗಕ್ಕಂತ ನಿಂತುಬಿಟ್ಟಿತು. ಇಷ್ಟರವರೆಗೂ ತಲೆ ಎತ್ತರಿಸಿಕೊಂಡು ಇಡೀ ಊರೇ ತನ್ನಪ್ಪನ್ನ ಆಸ್ತಿ ಎಂಬಂತೆ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಗತ್ತಿನಿಂದ ನೋಡುತ್ತ ಬರುತ್ತಿದ್ದ ಅವನು ಮಾಳಗಡ್ಡಿ ಬೇಲಿಗಳ ಹತ್ತಿರ ಬಂದದ್ದೇ ಬಾಯಿ ತುಂಬಾ ವಿಮಲ್ ತುಂಬಿಕೊಂಡು ಇನ್ನೇನು ತನ್ನ ಮುಖಕ್ಕೆ ಉಗಿಯಲು ಸಿದ್ಧನಾಗಿ ನಿಂತಿರುವ ವಿಮಲ್ ಶೆಟ್ಟಿಯನ್ನು ಕಂಡದ್ದೇ ಥರ ಥರ ನಡುಗಿಬಿಟ್ಟ. ಇದಕ್ಕಾಗೇ ಕಾದಿದ್ದ ವಿಮಲ್ ಶೆಟ್ಟಿ, ಬಾಯಲ್ಲಿ ವಿಮಲ್ ಇಟ್ಟುಕೊಂಡೇ ಗುಳು ಗುಳು ಸೌಂಡ್ ಮಾಡುತ್ತ 'ಗೌರಾ ಈಗ್ ಶದ್ಯ ಶಾಲಾ ವಾಪಶ್ ಕೊಟ್ಟೆ ಉಳ್ಕಂತಿ. ಇಲ್ಲಾಂದ್ರ ಗೌರ ಪೌರ ಅನ್ನದ್ದೂ ನೋಡ್ಲಾರ್ದಂಗ್ ಮುಖಿಕ್ ಉಗುಳ್ಬುಡುತ್ತೊಡು' ಎಂದು ಬೆದರಿಕೆ ಹಾಕಿದ. ಈ ಮಾತಿಗಂತೂ ಗೌಡ ಧೋತರದಲ್ಲಿ ಉಚ್ಚೆ ಹೊಯ್ದುಕೊಳ್ಳುವುದೊಂದು ಬಾಕಿ.'ಶೇನ್ ಮಕಾ ನೋಡ್ತಿ ಬಡಾನ್ ಏನಾರೊಂದ್ ಬೊಗಳು. ಏನ್ ದಿನಕ್ಕೊಂದ್ ಆಟ ಅಚ್ಚಿಯನು? ಇವತ್ ನಾನ್ ನೀನ್ ಏನ್ ಶಂಟ ಏಳಿದ್ರೂ ಕೇಳಲ್ಲ. ಏನ್ ನನಿಗೆ ನಾಕ್ ದಿನಾ ಟೈಪಾಡ್ ಬಂದ್ವಂತ ಸತ್ತಾ ಹೋಗ್ಬಿಟ್ನೆ ಅಂತ ತಿಳ್ಕಂಬುಟ್ಟೆ ಏನ್ ಕತಿ? ನಿನಿಗ್ ಕೊಟ್ಟೆರ ಶಾಲಾ ಇಸ್ಕಳಮಟ ಶಾಯಾ ಮಗಾ ಅಲ್ಲಾ ನಾನ್ ಶಾಯಿತ್ನಂದ್ರು ಬ್ಯಾಂಕಿನ್ ಶುಳ್ಳೆಮಕ್ಳು ಬುಡಂಗಿಲ್ಲಾ ಯೆಲ್ಲಿ ನಾನ್ ಕೊಟ್ಟೆರ ಶಾಲಾ?' ಎಂದು ಗೌಡನ ಕೊರಳುಪಟ್ಟಿ ಹಿಡಿದು ಅಬ್ಬರಿಸಿದ. ಗೌಡನಿಗೆ ಅಂಥ ತಂಪೊತ್ತಿನಲ್ಲೂ ಬೆವರು ಬಂತು. ಟವೆಲ್ ತೆಗೆದು ಮುಖ ಒರೆಸಿಕೊಳ್ಳುತ್ತ ಶೆಟ್ಟಿಯ ಮುಖ ನೋಡತೊಡಗಿದ. ಶೆಟ್ಟಿ 'ಏನ್ ನನ್ ತುಣ್ಣೆ ನೋಡ್ತಿ ಬಾಯ್ಬುಟ್ ಬೊಗಳು' ಎಂದು ಮತ್ತೊಮ್ಮೆ ಗದರಿಸಿದ. ಗೌಡನಿಗೆ ಒಂದು ಕ್ಷಣ, 'ಈ ಶೆಟ್ಟಿ ಸುಳೆಮಗನ್ ತೊಲ್ದಿಗೊದ್ ಸಾಯಿಸ್ಬುಡ್ಲನು?' ಎನ್ನಿಸಿತು. ತನ್ನ ಈ ಮಾರಣಾಂತಿಕ ವಿಚಾರವನ್ನು ಅಲ್ಲಿಗೇ ಕೈ ಬಿಟ್ಟು 'ಶೆಟ್ರ ಬೇಕಾರ್ ಕಾಲಿಗ್ ಬಿದ್ಬಿಡುತ್ನು ಇವತ್ತೊಂದಿಸ ಟೈಮ್ ಕೊಡ್ರಿ. ನಾಳೆ ತಂದ್ ಕೊಟ್ಬುಡುತ್ನು' ಎಂದು ಬೇಡಿಕೊಂಡು ಪಾರಾಗಲು ಯತ್ನಿಸಿದ. ಇವತ್ತು ತಾನು ಕೊಟ್ಟಿರುವ ದುಡ್ಡು ವಾಪಸ್ ಇಸಿದುಕೊಳ್ಳದೆ ಮನೆಗೆ ಹೋಗಲೇಬಾರದು ಎಂದು ನಿರ್ಧರಿಸಿ ಬಂದಿದ್ದ ಶೆಟ್ಟಿ, 'ಏನ್ ನಾಳೆ ಕೊಟ್ಬುಡ್ತಿ? ಎಷ್ಟ್ ದಿಸದಿಂದ ಹಿಂಗಾ ಹೇಳಾಕತ್ತಿಲ್ ನೀನ್? ಇವತ್ ನಿನ್ ಕತಿ ಕೇಳಾಕ್ ಬಂದಿಲ್ ನಾ ನಾನ್ ಕೊಟ್ಟೆರ ರಕ್ಕ ಈಗಂದ್ರ ಈಗ ಬೇಕ್ ನಂಗ..' ಎಂದು ತನ್ನ ಪಟ್ಟು ಸಡಿಲಿಸದೆ ಎದುರು ನಿಂತ. ಗೌಡನಿಗೆ ಅವನನ್ನು ಅಲ್ಲೇ ಕತ್ತು ಹಿಚುಕಿ ಸಾಯಿಸಿಬಿಡಬೇಕು ಎಂದು ಮತ್ತಷ್ಟು ಬಲವಾಗಿ ಅನ್ನಿಸತೊಡಗಿತು. ಆದರೂ ತಡೆದುಕೊಂಡು 'ಸಲುಪ್ ಸಿಟ್ ಕಮ್ಮಿ ಮಾಡ್ಕರಿ ಶೆಟ್ರ, ನಿಮ್ ರೊಕ್ಕಾ ಕೊಡ್ಲಾರ್ದಂಗ್ ನಾನೇನ್ ಸತ್ ಗಿತ್ ಹೋಗಂಗಿಲ್ಲ ಮನ್ಯಾಗ್ ರಕ್ಕ ಅದ್ಯಾವ.. ಕೊಟ್ ಬುಡುತ್ನು.. ಆದ್ರ ಒಂದೈದ್ ನಿಮಿಷ ದಡ್ಡಿ ಒತ್ತಿಗ್ಯಂಡ್ ಬಂದೇತಿ.. ಕುಂತ್ ಬಂದ್ ಬುಡುತ್ನು ನೀವ್ ಬೇಕಾರ್ ಇಲ್ಲೇ ನಿಂತ್ಗರಿ' ಎಂದ ತುಂಬಾ ಸವಿನಯನಾಗಿ. ಸ್ವಲ್ಪ ಯೋಚಿಸಿದ ಶೆಟ್ಟಿ, 'ಆತ್ ಆತು ಆಮೇಲ್ ಇಲ್ಲೇ ಹೇಗ್ಗೀತ್ಗಂಡ್ರ ನಾನೇನ್ ಮಾಡ್ಲಿ? ಹೋಗ್ ಬಡಾ ಬಡಾ ಹೋಗಿ ಅದೇಟ್ ಹೇಲ್ತಿ ಹೇತ್ ಬಾ. ನಾನ್ ಇಲ್ಲೇ ನಿಂತಿರುತ್ನು.' ಎಂದು ಪರ್ಮಿಷನ್ ಕೊಟ್ಟ. ಗೌಡ ಸಿಕ್ಕಿದ್ದೆ ಚಾನ್ಸ್ ಎಂದುಕೊಂಡು ಬೇಲಿಯ ಮರೆಗೆ ಹೋಗಿ ಚೊಂಬು ಕೆಳಗಿಟ್ಟು ಧೋತರ ಏರಿಸಿದವನಂತೆ ಮಾಡಿದವನೇ ಶೆಟ್ಟಿ ಆ ಕಡೆ ಈ ಕಡೆ ನೋಡುತ್ತ ನಿಂತಿದ್ದ ಸಮಯದಲ್ಲಿ ಅಲ್ಲಿಂದ ಕಾಲ್ಕಿತ್ತು ಓಡತೊಡಗಿದ. ನಾಲ್ಕಾರು ವರ್ಷಗಳಿಂದ ಮಳೆನೀರು ಕಾಲುವೆ ನೀರು ಏನನ್ನೂ ಕಾಣದೆ ಬರಡಾಗಿ ಬಿರುಕುಬಿಟ್ಟಿರುವ ಸುತ್ತಲ ಹೊಲಗದ್ದೆಯ ವಿಸ್ತಾರ ಬಯಲನ್ನು ನೋಡುತ್ತ ನಿಂತಿದ್ದ ಶೆಟ್ಟಿ ಗೌಡನ ಚಪ್ಪಲಿಯ ಸದ್ದಿಗೆ ಎಚ್ಚೆತ್ತ. ಗೌಡ ತನ್ನಿಂದ ತಪ್ಪಿಸಿಕೊಂಡು ಓಡುತ್ತಿರುವುದು ಗೊತ್ತಾದದ್ದೇ 'ಲೇ ಗೌರ' ಎಂದು ಅವನ ಹಿಂದೆ ಓಡತೊಡಗಿದ. ಗೌಡ ಇವನು ತನ್ನ ಹಿಂದೆ ಬರುತ್ತಿರುವುದು ಗೊತ್ತಾದದ್ದೇ ಮತ್ತಷ್ಟು ಜೋರಾಗಿ ಓಡತೊಡಗಿದ. ಶೆಟ್ಟಿಯೂ 'ಇವತ್ ಬುಡಬಾರ್ದ್ ಇವ್ನಾ' ಅಂದ್ಕೊಂಡು ಮತ್ತೊಂದು ವಿಮಲ್ ಹಾಕಿಕೊಂಡು ಅವನ ಹಿಂದೆ ಓಡತೊಡಗಿದ. ಮೊದಲೇ ಡೊಳ್ಳುಹೊಟ್ಟೆಯ ದಿಗಡದಿಮ್ಮನಾಗಿರುವ ವಿಮಲ್ ಶೆಟ್ಟಿಗೆ ಗೌಡನ ಹಿಂದೆ ಒಂದಷ್ಟು ದೂರ ಓಡಿದ್ದೇ ಸಾಕಾಗಿ ಮುಕುಳ್ಯಾಗೆಲ್ಲ ನೀರು ಬಸಿಯತೊಡಗಿ ಒಂದೆಡೆ ನಿಂತು ನಾಯಿ ತೇಕಿದಂತೆ ತೇಕತೊಡಗಿದ. ಗೌಡನೂ ಸ್ವಲ್ಪ ದೂರ ಹೋಗಿ ಏದುಸಿರು ಬಿಡುತ್ತ ನಿಂತು ದಮ್ಮು ಆರಿಸಿಕೊಳ್ಳತೊಡಗಿದ. ಶೆಟ್ಟಿ 'ಈ ಶುಳ್ಯಮಗ ಶಿಂಗಾ ಬುಟ್ರ ಊರ್ ಬುಟ್ ವೋಗಿ ನನಿಗೆ ಎಣ್ಣೆ ಕುಡುಶ್ತಾನ' ಎಂದು ನಿರ್ಧರಿಸಿ ತನ್ನೆಲ್ಲ ಶಕ್ತಿಯನ್ನು ಒಟ್ಟುಗೂಡಿಸಿ ಮತ್ತೆ ಓಡಲು ಶುರು ಮಾಡಿದ್ದೇ ಅವನ ಕಾರ್ಬನ್ ಮೊಬೈಲು 'ಸಾಯಿರಾಮ್ ಸಾಯಿರಾಮ್ ಸಾಯಿಶಕ್ತಿ.. ಶಿರಡೀಕೆಥಾತಾ ಸಬ್ಕೋ ಭಗವಾನ್' ಎಂದು ಜೋರಾಗಿ ಹೊಡೆದುಕೊಳ್ಳತೊಡಗಿತು. ಇವನು ಓಡುತ್ತಲೇ ಅದನ್ನು ರಿಸೀವ್ ಮಾಡಿ 'ಹಲೋ' ಎಂದ. ಆ ಕಡೆಯಿಂದ ಒಂದು ಹೆಣ್ಣು ದನಿ, 'ಹಲೋ ಸರ್ ನಾವ್ ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಮಾತಾಡ್ತಿರೋದು.. ನಿಮ್ ಈ ಮಂಥ್ ಇನ್‌ಸ್ಟಾಲ್‌ಮೆಂಟ್ ಕಟ್ಟೋಕೆ ಇವತ್ತೇ ಲಾಸ್ಟ್ ಡೇಟ್ ಇತ್ತು' ಎಂದು ಮುಂದೇನೋ ಹೇಳಬೇಕೆನ್ನುವಷ್ಟರಲ್ಲಿ ಶೆಟ್ಟಿ, 'ಯವ್ವಾ ಹಡ್ಡಿಪಡ್ಡಿ ನಾನೇನ್ ನಿಮ್ ರಕ್ಕ ಕೊಳ್ಳಿಗ್ ಕಟ್ಗ್ಯಂಡ್ ಶಾಯಲ್ಲ... ಇಲ್ಲೊಬ್ ಶುಳೆಮಗ ಕೊಡ್ಬೇಕ್ ನನಿಗೆ ಇಶ್ಗಂಡ್ ಕೊಡುತ್ತೇಳು' ಎಂದು ಸಿಟ್ಟಿನಿಂದ ಕಾಲ್ ಕಟ್ ಮಾಡಿ ಫೋನ್ ಜೇಬಿಗೆ

